**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 37/2024**

**ಚಾ.ಸಾ. :-4**
**ಪ್ರಾ.ಸಾ. :-4**

| | |
|---|---|
| ಹೆಸರು | : ನಟರಾಜು.ಬಿ |
| ತಂದೆಯ ಹೆಸರು | : ಬಸವರಾಜಪ್ಪ |
| ವಯಸ್ಸು | : 44 ವರ್ಷ |
| ಉದ್ಯೋಗ | : ಚಾಲಕ ಕಂ.ನಿರ್ವಾಹಕ |
| ವಾಸಸ್ಥಳ | : ಅಗ್ರಹಾರ, ಚಿಕ್ಕಮಗಳೂರು |

ಪ್ರಮಾಣೀಕರಿಸಲಾದ ದಿನಾಂಕಃ- **09.06.2026**

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :**

ಆರೋಪಿ ನಮ್ಮ ಬಸ್ಸಿನ ಚಾಲಕ. ಸುಮಾರು 2 ವರ್ಷಗಳ ಹಿಂದೆ ಪಾಲಹಳ್ಳಿಯಲ್ಲಿ ನಮ್ಮ ಬಸ್ಸಿನಿಂದ ಇಳಿಯುತ್ತಿದ್ದ ವ್ಯಕ್ತಿಗೆ ಅಪಘಾತವಾಗಿರುತ್ತದೆ. ಆ ಸಮಯದಲ್ಲಿ ನಾನು ಬಸ್ಸಿನ ಹಿಂಭಾಗದಲ್ಲಿ ಪ್ರಯಾಣಿಕರಿಗೆ ಟಿಕೇಟ್ ನೀಡುತ್ತಿದ್ದೆ, ಹಾಗಾಗಿ ಅಪಘಾತವನ್ನು ನಾನು ನೇರವಾಗಿ ನೋಡಿರುವುದಿಲ್ಲ. ಅಪಘಾತವು ಹೇಗೆ, ಯಾವ ರೀತಿ ಹಾಗೂ ಯಾರ ನಿರ್ಲಕ್ಷ್ಯತನದಿಂದ ಉಂಟಾಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

*(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)*

**ಪಾಟೀ ಸವಾಲು : ಮಾನ್ಯ ಸ.ಸ.ಅ.ರವರಿಂದ :**

ದಿನಾಂಕಃ 19.05.2024 ರಂದು ರಾತ್ರಿ 9.45 ರ ಸಮಯದಲ್ಲಿ ಆರೋಪಿ ಬಸ್ಸನ್ನು ನಿಲ್ದಾಣದ ಬಳಿ ನಿಲ್ಲಿಸಿರುತ್ತಾರೆ, ನಂತರ ಪುಟ್ಟಸ್ವಾಮಿರವರು ಬಸ್ಸಿನಿಂದ ಇಳಿಯುತ್ತಿದ್ದಾಗ ಆರೋಪಿ ಇದ್ದಕ್ಕಿದ್ದಂತೆ ಬಸ್ಸನ್ನು ಚಾಲನೆ ಮಾಡಿದ್ದು ಆಗ ಪುಟ್ಟಸ್ವಾಮಿ ಬಸ್ಸಿನಿಂದ ಕೆಳಗೆ ಬಿದ್ದು, ಬಸ್ಸಿನ ಚಕ್ರ

ಅವರ ಮೇಲೆ ಹರಿದು ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿ ನಾನು ಬಸ್ಸನ್ನು ನಿಲ್ಲಿಸುವಂತೆ ನಿಲ್ದಾಣ ತಲುಪುವುದಕ್ಕೂ ಮುಂಚೆ ಚಾಲಕನಿಗೆ ಸೂಚನೆ ನೀಡಿದ್ದು, ಆ ಸಮಯದಲ್ಲಿ ಆರೋಪಿಯು ಬಸ್ಸನ್ನು ಸ್ವಲ್ಪ ನಿಧಾನ ಮಾಡಿದ್ದರು ಆದರೆ ಸಂಪೂರ್ಣವಾಗಿ ನಿಲ್ಲಿಸಿರಲಿಲ್ಲ, ಆ ಸಮಯದಲ್ಲಿ ಮೃತ ಪುಟ್ಟಸ್ವಾಮಿರವರು ಚಲಿಸುತ್ತಿದ್ದ ಬಸ್ಸಿನಿಂದಲೇ ಇಳಿಯಲು ಪ್ರಯತ್ನಿಸಿರುತ್ತಾರೆ ಹಾಗಾಗಿ ಅಪಘಾತ ಸಂಭವಿಸಿರುತ್ತದೆ ಎನ್ನುತ್ತಾರೆ. ಆ ದಿನ ಬಸ್ ಸಂಪೂರ್ಣವಾಗಿ ನಿಂತಿದ್ದು, ಪ್ರಯಾಣಿಕರು ಇಳಿಯುವಾಗ ಚಾಲಕ ಬಸ್ ಚಾಲನೆ ಮಾಡಿರುತ್ತಾರೆ ಎಂದರೆ ಸುಳ್ಳು.

ಸಾಕ್ಷಿಯು ಪೊಲೀಸರ ಮುಂದೆ ನೀಡಿದ ಹೇಳಿಕೆಯ ಸಂಪೂರ್ಣ ಭಾಗ "ನಾನು ಮೇಲಿನ ವಿಳಾಸದಲ್ಲಿ .........ನೀಡಿರುತ್ತೇನೆ" ಇದನ್ನು ಸಂಪೂರ್ಣವಾಗಿ ಸಾಕ್ಷಿಯವರಿಗೆ ಓದಿ ಹೇಳಲಾಗಿ ಸಾಕ್ಷಿಯು ಸದರಿ ಹೇಳಿಕೆಯನ್ನು ಪೊಲೀಸರಿಗೆ ನೀಡಿರುವುದಿಲ್ಲ ಎಂದು ನಿರಾಕರಿಸಿದ ಮೇರೆಗೆ ಸದರಿ ಹೇಳಿಕೆಯನ್ನು ನಿಪಿ-**7** ಎಂದು ಗುರುತಿಸಲಾಯಿತು. ಆರೋಪಿ ನನ್ನ ಸಹೋದ್ಯೋಗಿಯಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು**:** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

ಪ್ರಧಾನ ಹಿರಿಯ ಸಿಜೆ ಮತ್ತು
ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.

**ಸಾಕ್ಷಿದಾರರ ಸಹಿ.**